ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೬ನೇ ಇಸವಿಯ ಕರ್ನಾಟಕ ಲೋಕಾಯುಕ್ತ (ಎರಡನೇ ತಿದ್ದುಪಡಿ) ವಿಧೇಯಕ''ವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಆಹಾರ ಹಾಗೂ ನಾಗರೀಕ ಸರಬರಾಜುಗಳ ಮಂತ್ರಿ).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಲೋಕಾಯುಕ್ತ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

* ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

೧೯೮೬ನೇ ಇಸವಿಯ ಕರ್ನಾಟಕ ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ, ದಾಖಲೆಗಳ ಒದಗಿಸುವಿಕೆ ಮತ್ತು ಇನ್ನಿತರ ಉಪಬಂಧಕಗಳು) (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಆಹಾರ ಹಾಗೂ ನಾಗರೀಕ ಸರಬರಾಜುಗಳ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ''೧೯೮೬ನೇ ಇಸವಿಯ ಕರ್ನಾಟಕ ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ, ದಾಖಲೆಗಳ ಒದಗಿಸುವಿಕೆ ಮತ್ತು ಇನ್ನಿತರ ಉಪಬಂಧಕಗಳು) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೬ನೇ ಇಸವಿಯ ಕರ್ನಾಟಕ ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ, ದಾಖಲೆಗಳ ಒದಗಿಸುವಿಕೆ ಮತ್ತು ಇನ್ನಿತರ ಉಪಬಂಧಕಗಳು) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಆಹಾರ ಹಾಗೂ ನಾಗರೀಕ ಸರಬರಾಜುಗಳ ಮಂತ್ರಿ).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ, ದಾಖಲೆಗಳ ಒದಗಿಸುವಿಕೆ ಮತ್ತು ಇನ್ನಿತರ ಉಪಬಂಧಕಗಳು) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

*ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

೧೯೮೬ನೇ ಇಸವಿಯ ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು (ಸ್ವಾಧೀನತೆ ಮತ್ತು ವರ್ಗಾವಣೆ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು (ಸ್ವಾಧೀನತೆ ಮತ್ತು ವರ್ಗಾವಣೆ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಒಪ್ಪಿಗೆಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೬ನೇ ಇಸವಿಯ ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು (ಸ್ವಾಧೀನತೆ ಮತ್ತು ವರ್ಗಾವಣೆ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

---

* Annexure.